ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 13-02-1991.

# "ವಿಶ್ವ ಪರಿವರ್ತನೆಯಲ್ಲಿ ತೀವ್ರತೆ ತರುವ ಸಾಧನ ಏಕಾಗ್ರತೆಯ ಶಕ್ತಿ ಮತ್ತು ಏಕರಸ ಸ್ಥಿತಿ"

(विश्व परिवर्तन में तीव्रता लाने का साधन एकाग्रता की शक्ति एवं एकरस स्थिति)

**ನಿರಾಕಾರನು, ಸರ್ವಶಕ್ತಿವಂತನಾದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ವಿಶ್ವಕಲ್ಯಾಣಕಾರಿ ಶಿವತಂದೆ ತನ್ನ ಕಲ್ಯಾಣಾರಿ ಮಕ್ಕಳ ಪ್ರತಿ ಹೇಳಿದರು.**

ಇಂದು ಬಾಪ್‌ದಾದಾ ತಮ್ಮ ದೂರದೇಶಿ ಮತ್ತು ದೇಶಿ ಮಕ್ಕಳಿಗೆ ಮಿಲನದ ಶುಭಾಶಯ ತಿಳಿಸಲು ಬಂದಿರುವರು. ನೀವೆಲ್ಲರೂ ದೂರದೇಶದಿಂದ ಬಂದಿರುವಿರಿ. ತಂದೆಯೂ ದೂರ ದೇಶದಿಂದ ಬಂದಿರುವರು. ಮಕ್ಕಳಿಗೆ ಶುಭಾಶಯ ಹೇಳಲು ಬಂದಿರುವರು ಮತ್ತು ತಂದೆ ಮಕ್ಕಳಿಗೆ ಪದಮ ಪಟ್ಟು ಶುಭಾಶಯ ಕೊಡುತ್ತಿರುವರು. ಆಚರಿಸುವುದು ಅರ್ಥಾತ್ ಸಮಾನ ಆಗುವುದು. ಪ್ರಪಂಚದವರು ಕೇವಲ ಆಚರಿಸುತ್ತಾರೆ ಆದರೆ ತಂದೆ ಆಚರಿಸುತ್ತಾರೆ ಅರ್ಥಾತ್ ಮಾಡುತ್ತಾರೆ. ಎಲ್ಲಾ ಮಕ್ಕಳು, ಸಾಕಾರ ರೂಪದಲ್ಲಿ ಸನ್ಮುಖವೇ ಇರಲಿ, ಅಥವಾ ಆಕಾರ ರೂಪದಲ್ಲಿಯೇ ಸನ್ಮುಖವೇ ಇರಲಿ, ಎಲ್ಲಾ ಮಕ್ಕಳು ವಿಶ್ವದ ಮೂಲೆ ಮೂಲೆಯಲ್ಲಿ ತಂದೆಯ ವಜ್ರ ಸಮಾನ ಜಯಂತಿ ಆಚರಿಸುತ್ತಿರುವರು. ಬಾಪ್‌ದಾದಾ ಆಕಾರಿ ರೂಪದಲ್ಲಿ ಸನ್ಮುಖ ಇರುವ ಮಕ್ಕಳಿಗೂ ಸಹ ವಜ್ರ ಸಮಾನ ಜಯಂತಿಯ ವಜ್ರ ಸಮಾನ ಪದಮಾಪದಮ್ ಶುಭಾಶಯಗಳನ್ನು ಕೊಡುತ್ತಿರುವರು. ಈ ಮಹಾನ್ ಅವತರಿತ ಆಗುವ ಜಯಂತಿಯನ್ನು ಆಚರಿಸುತ್ತಾ ನೀವೂ ಸಹ ಸ್ವಯಂ ವಜ್ರ ಸಮಾನ ಆಗಿರುವಿರಿ. ಇದಕ್ಕೆ ಹೇಳಲಾಗುತ್ತದೆ ಆಚರಿಸುವುದು ಅರ್ಥಾತ್ ಆಗುವುದು. ಪ್ರತಿಯೊಬ್ಬ ಮಗುವಿನ ಮಸ್ತಕದಲ್ಲಿ ಪದಮಾಪದಮ್ ಭಾಗ್ಯಶಾಲಿ ಆಗುವ ನಕ್ಷತ್ರ ಹೊಳೆಯುತ್ತಿದೆ. ಹೀಗೆ ಆಚರಿಸುತ್ತಾ ಆಚರಿಸುತ್ತಾ ಸದಾ ಕಾಲಕ್ಕಾಗಿ ಭಾಗ್ಯಶಾಲಿಗಳಾಗಿಬಿಟ್ಟಿರಿ. ಇಂತಹ ಅಲೌಕಿಕ ಜಯಂತಿ

ಕಲ್ಪದಲ್ಲಿ ಯಾರೂ ಆಚರಿಸುವುದಿಲ್ಲ. ಮಹಾನ್ ಆತ್ಮರ ಜಯಂತಿಯನ್ನು ಆಚರಿಸುತ್ತಾರೆ ಅದರೆ ಆ ಮಹಾನ್ ಆತ್ಮರು ಆಚರಿಸುವವರನ್ನು ಮಹಾನ್ ಮಾಡುವುದಿಲ್ಲ. ಈ ಸಂಗಮ ಯುಗದಲ್ಲಿ ನೀವು ಮಕ್ಕಳು ಪರಮಾತ್ಮ ಜಯಂತಿಯನ್ನು ಆಚರಿಸುತ್ತಾ ಮಹಾನ್ ಆಗುತ್ತೀರಿ. ಶ್ರೇಷ್ಠಾತಿ ಶ್ರೇಷ್ಠ ಆತ್ಮರಾಗುತ್ತೀರಿ. ಇಂತಹ ವಜ್ರ ಸಮಾನ ಜೀವನ ತಯಾರು ಮಾಡುತ್ತಾರೆಂದರೆ ಜನ್ಮ ಜನ್ಮಾಂತರ ವಜ್ರ ಮತ್ತು ರತ್ನಗಳ ಜೊತೆ ಆಡುತ್ತೀರಿ. ಇಂದಿನ ನೆನಪಾರ್ಥ ದಿನ ಕೇವಲ ತಂದೆಯದಲ್ಲ ಆದರೆ ಮಕ್ಕಳ ಜನ್ಮದಿನವೂ ಆಗಿದೆ. ಏಕೆಂದರೆ ತಂದೆಯ ಅವತರಣೆಯಾದಾಗ ತಂದೆಯ ಜೊತೆ ಬ್ರಹ್ಮಾದಾದಾ ಪರಿವರ್ತಿತ ಆತ್ಮ ಸಹ ಅವತರಿತರಾಗುತ್ತಾರೆ. ಬಾಬಾ(ತಂದೆ) ಮತ್ತು ದಾದಾ(ಅಣ್ಣ) ಇಬ್ಬರೂ ಜೊತೆ-ಜೊತೆಗೆ ಅವತರಿತರಾಗುತ್ತಾರೆ. ಬ್ರಾಹ್ಮಣರಿಲ್ಲದೇ ಬಾಪ್‌ದಾದಾ ಸ್ಥಾಪನೆಯ ಯಜ್ಞವನ್ನು ರಚನೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಬಾಪ್‌ದಾದಾ ಮತ್ತು ಬ್ರಾಹ್ಮಣ ಮಕ್ಕಳು ಜೊತೆ ಜೊತೆಗೆ ಅವತರಿತರಾಗುತ್ತಾರೆ. ಹಾಗಾದರೆ ಯಾರ ಜನ್ಮ ದಿನ ಎಂದು ಹೇಳಬೇಕು - ನಿಮ್ಮದೋ ಅಥವಾ ತಂದೆಯದೋ. ನಿಮ್ಮದೂ ಸಹ ಇದೆ ಅಲ್ಲವೇ! ಆದ್ದರಿಂದ ತಂದೆ ನಿಮಗೆ ಶುಭಾಶಯ ಕೊಡುತ್ತಾರೆ ಮತ್ತು ನೀವು ತಂದೆಗೆ ಶುಭಾಶಯ ಕೊಡುತ್ತೀರಿ.

ಶಿವ ಜಯಂತಿ ಅರ್ಥಾತ್ ಪರಮಾತ್ಮ ಜಯಂತಿಗೆ ಮಹಾಶಿವರಾತ್ರಿ ಎಂದು ಏಕೆ ಹೇಳುತ್ತಾರೆ? ಕೇವಲ ಶಿವರಾತ್ರಿ ಎಂದು ಹೇಳುವುದಿಲ್ಲ ಆದರೆ ಮಹಾಶಿವರಾತ್ರಿ ಎಂದು ಹೇಳುತ್ತಾರೆ. ಏಕೆಂದರೆ ಈ ಅವತರಣೆಯ ದಿನದಂದು ಶಿವ ತಂದೆ ಮತ್ತು ಬ್ರಹ್ಮಾದಾದಾ ಮತ್ತು ಬ್ರಾಹ್ಮಣರು ಮಹಾನ್ ಸಂಕಲ್ಪದ ವ್ರತ ತೆಗೆದುಕೊಂಡರು ಏನೆಂದರೆ ವಿಶ್ವವನ್ನು ಪವಿತ್ರತೆಯ ವ್ರತದಿಂದ ಮಹಾನ್ ಶ್ರೇಷ್ಠ ಮಡುವೆವು. ವಿಶೇಷ ಆದಿದೇವ ಬ್ರಹ್ಮಾ ತಮ್ಮ ನಿಮಿತ್ತ ಬ್ರಾಹ್ಮಣರ ಆದಿ ಮಕ್ಕಳ ಜೊತೆ ಈ ಮಹಾನ್ ವ್ರತ ತೆಗೆದುಕೊಳ್ಳಲು ನಿಮಿತ್ತ ಆದರು. ಆದ್ದರಿಂದ ಮಹಾನ್ ಮಾಡುವ ವ್ರತ ತೆಗೆದುಕೊಳ್ಳುವ ದಿವ್ಯದಿನ ಆಗಿದೆ. ಆದ್ದರಿಂದ ಮಹಾ ಶಿವರಾತ್ರಿ ಎಂದು ಹೇಳಲಾಗುತ್ತದೆ. ಮತ್ತು ನೀವು ಬ್ರಾಹ್ಮಣ ಮಕ್ಕಳು ಈ ಮಹಾನ್ ವ್ರತ ಕೈಗೊಂಡಿರಿ ಇದರ ಸ್ಮೃತಿಚಿಹ್ನೆ ಸ್ವರೂಪವಾಗಿ ಈಗಲೂ ಭಕ್ತರು ವ್ರತ ಮಾಡುತ್ತಾರೆ. ಈ ಮಹಾನ್ ಜಯಂತಿ ಪ್ರತಿಜ್ಞೆ ಮಾಡುವ ಜಯಂತಿ ಆಗಿದೆ. ಒಂದು ಕಡೆ ಪ್ರತ್ಯಕ್ಷ ಆಗುವ ಜಯಂತಿ ಆಗಿದೆ ಇನ್ನೊಂದು ಕಡೆ ಪ್ರತಿಜ್ಞೆ ಮಾಡುವ ಜಯಂತಿ ಆಗಿದೆ. ಆದಿ ಸಮಯದಲ್ಲಿ ನೀವು ಯಾರೆಲ್ಲ ನಿಮಿತ್ತ ಆದಿರಿ ಆದಿ ದೇವನ ಜೊತೆ ಆದಿ ರತ್ನರೂ ಸಹ ಬಂದರು. ಅವರ ಪ್ರತಿಜ್ಞೆಯ ಪ್ರತ್ಯಕ್ಷ ಫಲ ನೀವೆಲ್ಲರೂ ಪ್ರತ್ಯಕ್ಷ ಆದಿರಿ. ನೋಡಿ, ಎಲ್ಲೆಲ್ಲಿಯೋ ಮೂಲೆಯಲ್ಲಿ ಹೋಗಿದ್ದೀರಿ. ಎಷ್ಟು ಮೂಲೆಗಳಲ್ಲಿ ಹೋಗಿದ್ದಿರಿ ಆದರೆ ತಂದೆಯು ಮಣ್ಣಿನಲ್ಲಿ ಮುಚ್ಚಿಹೋಗಿದ್ದ ತಮ್ಮ ವಜ್ರ ಸಮಾನ ಮಕ್ಕಳನ್ನು ಹುಡುಕಿದರಲ್ಲವೇ. ಈಗ ವಿಶ್ವದ ಮೂಲೆ ಮೂಲೆಯಲ್ಲಿ ನೀವು ಅತೀ ಪವಿತ್ರ ಮತ್ತು ಅತಿ ಶ್ರೇಷ್ಠ ವಜ್ರಗಳು ಹೊಳೆಯುತ್ತಿರುವಿರಿ. ಆದ್ದರಿಂದ ಈ ಪರಮಾತ್ಮ ಜಯಂತಿಯ ವ್ರತ ಮತ್ತು ಪ್ರತಿಜ್ಞೆಯ ಫಲ ಆಗಿದೆ. ನೀವೆಲ್ಲರೂ ಈಗಲೂ ಶಿವ ತಂದೆಯ ಧ್ವಜದ ಮುಂದೆ ಪ್ರತಿಜ್ಞೆ ಮಾಡುತ್ತೀರಿ ಅಲ್ಲವೇ. ಈ ಆದಿ ಪದ್ಧತಿಯ ವಿಧಿಯನ್ನು ಈಗಲೂ ಮಾಡುತ್ತಿರುವಿರಿ. ಈ ಪರಮಾತ್ಮ ಜಯಂತಿಯನ್ನು ಶಿವರಾತ್ರಿ ಎಂದು ಹೇಳುತ್ತಾರೆ. ರಾತ್ರಿ ಅರ್ಥಾತ್ ಅಂಧಕಾರ. ಅಂಧಕಾರದಲ್ಲಿ ವ್ಯಕ್ತಿ ಅಥವಾ ವಸ್ತು ಯಾವ ರೀತಿ ಇರುತ್ತದೊ ಅದೇ ರೀತಿ ಕಾಣಿಸುವುದಿಲ್ಲ. ಇದ್ದರೂ ಅದರಂತೆ ಕಾಣುವುದಿಲ್ಲ. ತಂದೆಯ ಅವತರಣೆಯಾದಾಗ ನೀವೂ ಏನಾಗಿರುವಿರಿ, ಯಾವ ರೀತಿ ಇರುವಿರಿ, ಹೇಗೆ ಇರುವಿರಿ. ನಿಮ್ಮನ್ನು ನೀವು ನೋಡಿಕೊಳ್ಳಲು ಸಾಧ್ಯವಿರಲಿಲ್ಲ ಮತ್ತು ತಂದೆಯನ್ನು ನೋಡಲು ಅರಿತುಕೊಳ್ಳಲು ಸಾಧ್ಯವಿರಲಿಲ್ಲ. ನಾನು ಆತ್ಮನಾಗಿರುವೆ. ಇದು ಇದ್ದರೂ ಜ್ಞಾನ ಅಥವಾ ಅನುಭವದ ನೇತ್ರದಿಂದ ನೋಡಲು ಸಾಧ್ಯವಿರಲಿಲ್ಲ. ನೇತ್ರ ಇದ್ದರೂ ಅಂಧಕಾರದಲ್ಲಿದ್ದಿರಿ. ನೇತ್ರ ಯಥಾರ್ಥ ಕಾರ್ಯ ಮಾಡದಿದ್ದರೆ ಸ್ಪಷ್ಟವಾಗಿ ಕಾಣಿಸುವುದಿಲ್ಲ. ಆದ್ದರಿಂದ ನೀವು ಅಂಧಕಾರದಲ್ಲಿ ಇದ್ದಿರಿ ಅಲ್ಲವೇ. ನಿಮ್ಮನ್ನೇ ನೀವು ನೋಡಲು ಸಾಧ್ಯವಿರಲಿಲ್ಲ ಆದ್ದರಿಂದ ತಂದೆ ಮೊದಲು ಈ ಅಂಧಕಾರವನ್ನು ಅಳಿಸಿ ಹಾಕುತ್ತಾರೆ. ಆದ್ದರಿಂದ ಶಿವರಾತ್ರಿ ಅರ್ಥಾತ್ ಅಂಧಕಾರ ಅಳಿದು ಯಥಾರ್ಥದ ಪ್ರಕಾಶ ಪ್ರಜ್ವಲಿತ ಆಗುವುದು, ಆದ್ದರಿಂದ ಶಿವರಾತ್ರಿ ಎಂದು ಹೇಳಿ ಆಚರಿಸುತ್ತಾರೆ. ಆ ಭಕ್ತಿ ಮಾರ್ಗದ ವಿಧಿ ಸಹ ನಿಮ್ಮ ಯಥಾರ್ಥ ವಿಧಿಯ ಸ್ಮೃತಿಚಿಹ್ನೆ ಆಗಿದೆ. ಒಂದು ಕಡೆ ಭಕ್ತರ ವಿಧಿ ಮತ್ತು ಇನ್ನೊಂದು ಕಡೆ ಮಕ್ಕಳ ಸಂಪೂರ್ಣ ವಿಧಿ. ಎರಡನ್ನೂ ನೋಡಿ ತಂದೆ ಖುಷಿಪಡುತ್ತಾರೆ. ನಮ್ಮ ಭಕ್ತರು ಫಾಲೋ ಮಾಡುವುದರಲ್ಲಿ ಎಷ್ಟು ಬುದ್ಧಿವಂತರಾಗಿದ್ದಾರೆ ಎನ್ನುವುದನ್ನು ನೋಡಿ ನೀವೂ ಸಹ

ಹರ್ಷಿತ ಆಗುತ್ತೀರಲ್ಲವೇ, ಅಂತಿಮ ಜನ್ಮದಲ್ಲಿಯೂ ಸಹ ನಿಮ್ಮ ಭಕ್ತಿಯ ವಿಧಿಯನ್ನು ನಿಭಾಯಿಸುತ್ತಾ ಬರುತ್ತಾರೆ. ಇದೆಲ್ಲವೂ ತಂದೆ ಮತ್ತು ನಿಮ್ಮ ಬಿಂದು ರೂಪದ ಕಮಾಲ್(ಅದ್ಭುತ) ಆಗಿದೆ. ಶಿವತಂದೆಯ ಜೊತೆ ಸಾಲಿಗ್ರಾಮಗಳ ಪೂಜೆಯೂ ಸಹ ನಡೆಯುತ್ತದೆ. ನೀವೆಲ್ಲರೂ ಬಿಂದು ಸ್ವರೂಪದ ಮಹತ್ವವನ್ನು ಅರಿತಿದ್ದೀರಿ. ಆದ್ದರಿಂದ ಈಗಿನವರೆಗೂ ಭಕ್ತರಲ್ಲಿ ಶಿವ ಅರ್ಥಾತ್ ಬಿಂದು ರೂಪದ ಮಹತ್ವ ಇದೆ. ಅವರು ಕೇವಲ ಬಿಂದು ರೂಪವನ್ನು ಅರಿತಿದ್ದಾರೆ. ಯಥಾರ್ಥ ರೂಪ ತಿಳಿದಿಲ್ಲ, ತಮ್ಮ ಪ್ರಕಾರವಾಗಿ ತಾವು ತಿಳಿದಿರುತ್ತಾರೆ. ಆದರೆ ನೀವು ತಂದೆಯನ್ನು ಕೇವಲ ಒಂದು ರೂಪದಿಂದ ಅಲ್ಲ ಆದರೆ ಬಿಂದುವಿನ ಜೊತೆ ಸರ್ವ ಖಜಾನೆಯ ಸಿಂಧು ಆಗಿದ್ದೀರಿ. ಹೀಗೆ ಬಿಂದು ರೂಪದ ಜೊತೆಗೆ ಸಿಂಧು ರೂಪವನ್ನು ಸಹ ಅರಿತುಕೊಡಿರುವಿರಿ, ಎರಡೂ ರೂಪದಿಂದ ಅರಿತುಕೊಡಿದ್ದೀರಿ ಅಲ್ಲವೇ. ಸಿಂಧು ಸ್ವರೂಪವನ್ನು ಅರಿತು ನೀವೂ ಸಹ ಮಾಸ್ಟರ್ ಸಿಂಧು ಆಗಿರುವಿರಿ. ನಿಮ್ಮಲ್ಲಿ ಎಷ್ಟು ಖಜಾನೆ ತುಂಬಿವೆ - ಲೆಕ್ಕ ಹಾಕಲು ಸಾಧ್ಯವಿದೆಯೇ? ಎಣಿಸಲಾಗದಷ್ಟು. ಅಪಾರ ಮತ್ತು ಅವಿನಾಶಿ. ಖಜಾನೆಗಳಿವೆ. ಎಲ್ಲರೂ ಮಾಸ್ಟರ್ ಸಿಂಧು ಆಗಿರುವಿರೋ ಅಥವಾ ಆಗಬೇಕಾಗಿದೆಯೋ?

ತಪಸ್ಯಾ ವರ್ಷದಲ್ಲಿ ಏನು ಮಾಡುವಿರಿ? ತಪಸ್ಸು ಅರ್ಥಾತ್ ದೃಢ ಸಂಕಲ್ಪ ಮಾಡುವುದು. ತಪಸ್ಸು ಅಂದರೆ ಏಕಾಗ್ರತೆ ಮತ್ತು ಧೃಢತೆ. ಯೋಗಿ ಜೀವನದಲ್ಲಂತೂ ಈಗಲೂ ಇರುವಿರಿ. ನೀವೆಲ್ಲರೂ ಯೋಗಿ ಜೀವನದವರು ಆಗಿರುವಿರಿ ಅಲ್ಲವೇ ಅಥವಾ 8 ಗಂಟೆ, 6 ಗಂಟೆ ಅಥವಾ ಕೆಲವೇ ಗಂಟೆಗಳ ಕಾಲ ಯೋಗ ಮಾಡುವವರಾಗಿರುವಿರೋ? ಯೋಗಿ ಜೀವನ ಇದ್ದೇ ಇದೆ. ಹಾಗಾದರೆ ವಿಶೇಷವಾಗಿ ತಪಸ್ಯಾ ವರ್ಷ ಏಕೆ ಮಾಡುತ್ತಿರುವಿರಿ? ಬಾಪ್‌ದಾದಾ ಎಲ್ಲಾ ಮಕ್ಕಳನ್ನು ಯೋಗಿ ಜೀವನವುಳ್ಳ ಯೋಗಿ ಆತ್ಮರ ರೂಪದಲ್ಲಿ ನೋಡಲು ಇಷ್ಟ ಪಡುತ್ತಾರೆ. ಮತ್ತು ಯೋಗಿ ಜೀವನದಲ್ಲಿಯೇ ಇರುವಿರಿ. ಬೇರೆ ಜೀವನವಂತೂ ಸಮಾಪ್ತಿಯಾಯಿತು. ಅಲೆದಾಡುತ್ತಿರುವ ಭೋಗಿ ಜೀವನದಿಂದ ಸುಸ್ತಾಗಿ ನಿರಾಶರಾಗಿ ವಿಚಾರ ಮಾಡಿ ತಿಳಿದುಕೊಂಡು ಯೋಗಿ ಆಗಿರುವಿರಿ, ವಿಚಾರ ಮಾಡಿ ತಿಳಿದುಕೊಂಡು ಯೋಗಿ ಆಗಿರುವಿರೊ ಅಥವಾ ಯಾರಾದರೂ ಹೇಳಿದ್ದಕ್ಕೆ ಆಗಿರುವಿರೋ? ಅನುಭವ ಮಾಡಿ ಆಗಿರುವಿರೋ ಅಥವಾ ಅನುಭವ ಕೇಳಿ ಆಗಿರುವಿರೋ? ಅನುಭವಿ ಆಗಿ ಯೋಗಿ ಆಗಿರುವಿರೋ ಅಥವಾ ಹೇಳಿ ಕೇಳಿ ಚೆನ್ನಾಗಿದೆ ಎನಿಸಿದ್ದಕ್ಕೆ ಯೋಗಿ ಆಗಿರುವಿರೋ? ಕೇವಲ ನೋಡಿ ವ್ಯಾಪಾರ ಮಾಡಿರುವಿರೋ ಅಥವಾ ಕೇಳಿ ಮಾಡಿರುವಿರೋ? ಯಾರದಾದರೂ ಮೋಸಕ್ಕೆ ಒಳಗಾಗಿಲ್ಲ ತಾನೆ? ಸರಿಯಾಗಿ ನೋಡಿರುವಿರಾ? ಈಗಲೂ ನೋಡಿಕೊಳ್ಳಿ. ಯಾವ ಜಾದೂ ಅಂತೂ ಆಗಿಲ್ಲ ತಾನೆ? ಮೂರೂ ಕಣ್ಣುಗಳನ್ನು ತೆರೆದುಕೊಡು ವ್ಯಾಪಾರ ಮಾಡಿರುವಿರಾ? ಏಕೆಂದರೆ ಬುದ್ಧಿಯೂ ಕಣ್ಣಾಗಿದೆ. ಈ ಎರಡು ಕಣ್ಣುಗಳು ಮತ್ತು ಬುದ್ಧಿಯ ಕಣ್ಣು ಮೂರನ್ನೂ ತೆರೆದು ವ್ಯಾಪಾರ ಮಾಡಿರುವಿರಿ. ಎಲ್ಲರೂ ಪಕ್ಕಾ ಆಗಿರುವಿರಾ?

ಎಲ್ಲಾ ಮಕ್ಕಳೂ ಮಧುರ ಮಧುರ ವಾರ್ತಾಲಾಪ ಮಾಡುತ್ತಾರೆ. ಹೇಳುತ್ತಾರೆ - ಬಾಬಾ ನಿಮ್ಮವರೇ ಆಗಿರುವೆವು, ಇನ್ನೆಲ್ಲಿಯೂ ಹೋಗುವುದಿಲ್ಲ. ಮತ್ತು ಜ್ಞಾನಿ ಯೋಗಿ ಜೀವನವೂ ಬಹಳ ಇಷ್ಟ ಆಗುತ್ತದೆ ಆದರೆ ಸ್ವಲ್ಪ ಸ್ವಲ್ಪ ಒಂದಿಲ್ಲ ಒಂದು ಮಾತಿನಲ್ಲಿ ಸಹನೆ ಮಾಡಬೇಕಾಗುತ್ತದೆ. ಆ ಸಮಯದಲ್ಲಿ ಮನಸ್ಸು ಬುದ್ಧಿ ಗೊಂದಲದಲ್ಲಿ ಬರುತ್ತದೆ ಇದು ಎಲ್ಲಿಯವರೆಗೆ ನಡೆಯುವುದು. ಹೇಗೆ ಆಗುವುದು....? ಮಧ್ಯ ಮಧ್ಯದಲ್ಲಿ ಏನು ಏರುಪೇರು ಆಗುತ್ತದೆ - ಮನಸ್ಸಿನದೇ ಇರಲಿ, ಸೇವೆಯದೇ ಇರಲಿ, ಜೊತೆಗಾರರದೇ ಇರಲಿ- ಈ ಏರುಪೇರು ನಿರಂತರದಲ್ಲಿ ಅಂತರವು ತರುತ್ತದೆ. ಆಗ ಸಹನಶಕ್ತಿಯ ಪರ್ಸೆಂಟೇಜ್ ಸ್ವಲ್ಪ ಕಡಿಮೆ ಆಗುತ್ತದೆ. ಪಕ್ಕಾ ಆಗಿರುವಿರಿ. ಆದರೆ ಪಕ್ಕಾ ಆದವರನ್ನೂ ಸಹ ಇಂತಹ ಮಾತುಗಳು ಒಂದೊಂದು ಬಾರಿ ಅಲ್ಲಾಡಿಸಿಬಿಡುತ್ತವೆ. ಆದ್ದರಿಂದ ತಪಸ್ಯಾ ವರ್ಷ ಅರ್ಥಾತ್ ಸರ್ವ ಗುಣಗಳಲ್ಲಿ. ಸರ್ವ ಶಕ್ತಿಗಳಲ್ಲಿ, ಸರ್ವ ಸಂಬಂಧಗಳಲ್ಲಿ ಮತ್ತು ಸರ್ವ ಸ್ವಭಾವ ಸಂಸ್ಕಾರಗಳಲ್ಲಿ ನೂರಕ್ಕೆ ನೂರರಷ್ಟು ಪಾಸ್ ಆಗುವುದು. ಈಗ ಉತ್ತೀರ್ಣ ಆಗಿರುವಿರಿ ಆದರೆ ಪೂರ್ಣ ಪಾಸ್ ಆಗಿಲ್ಲ. ಒಂದಾಗಿದೆ ಪಾಸ್, ಎರಡನೇಯದು ಪೂರ್ಣ ಉತ್ತೀರ್ಣ, ಮೂರನೇಯದು ಪಾಸ್ ವಿಥ್ ಆನರ್( ಗೌರವಯುತ ತೇರ್ಗಡೆ). ಆದ್ದರಿಂದ ತಪಸ್ಯಾ ವರ್ಷದಲ್ಲಿ ಪಾಸ್ ವಿಥ್ ಆನರ್ ಆಗುವವರು ಕಡಿಮೆ ಆದರೂ ಪೂರ್ಣ ಉತ್ತೀರ್ಣವಂತೂ ಎಲ್ಲರೂ ಆಗಲು ಸಾಧ್ಯವಿದೆ. ಮತ್ತು ಪೂರ್ಣ ಉತ್ತೀರ್ಣವಾಗಲು ಸಹಜ ಸಾಧನವಾಗಿದೆ- ಈ ತಪಸ್ಯಾ ವರ್ಷದಲ್ಲಿಯೂ ಕೂಡ ಪರೀಕ್ಷೆಗಳು ಬರುತ್ತವೆ. ಪೇಪರ್

ಬರುವುದಿಲ್ಲ ಎಂದೇನಲ್ಲ. ಆದರೆ ಅದನ್ನು ಪೇಪರ್ ಎಂದು ತಿಳಿದು ಪಾಸ್ ಮಾಡಿರಿ. ಬರುವ ಪರಿಸ್ಥಿತಿಗಳನ್ನು ಒಂದು ವಿಷಯದಂತೆ ಭಾವಿಸದೆ ಪೇಪರ್ ಎಂದು ತಿಳಿಯಿರಿ. ಇದು ಏಕೆ ಬಂತು, ಹೇಗೆ ಬಂತು, ಇದನ್ನು ಯಾರು ಮಾಡಿದರು? ಹೀಗೆ ಪೇಪರ್ ನಲ್ಲಿ ಪ್ರಶ್ನೆಗಳ ವಿಸ್ತಾರದಲ್ಲಿ ಹೋಗುವುದಲ್ಲ. ಪಾಸ್ ಆಗುವ ವಿಚಾರದಿಂದ ಪೇಪರನ್ನು ಪಾಸ್ ಮಾಡುತ್ತಾರೆ. ಆದ್ದರಿಂದ ಪೇಪರ್ ಎಂದು ತಿಳಿದು ಪಾಸ್ ಆಗಿರಿ. ಇದು ಏನು ಆಯಿತು! ಹೀಗೆ ಆಗುತ್ತದೆಯೇ! ಎಂದು ಯೋಚಿಸಬಾರದು. ನಿಮ್ಮ ದುರ್ಬಲತೆಯ ಕಾರಣದಿಂದ ಸಹ ಇದಂತೂ ಆಗಿಯೇ ಆಗುತ್ತದೆ ಎಂದು ತಿಳಿಯಬೇಡಿ. ಇದಂತೂ ಆಗಿಯೇ ಆಗುತ್ತದೆ, ಇಷ್ಟಂತೂ ಆಗಿಯೇ ಆಗುತ್ತದೆ. ಅನ್ಯರ ಬಗ್ಗೆ ಇವರು ಏನು ಮಾಡಿದರು. ಏಕೆ ಮಾಡಿದರು ಎಂದು ವಿಚಾರ ಮಾಡುತ್ತೀರಿ. ಈ ಎಲ್ಲಾ ಮಾತುಗಳನ್ನು ಪೇಪರ್ ಎಂದು ತಿಳಿದು ಉತ್ತೀರ್ಣ ಆಗುವ ಲಕ್ಷ್ಯ ಇಟ್ಟುಕೊಂಡು ಉತ್ತೀರ್ಣ ಮಾಡಿರಿ. ಉತ್ತೀರ್ಣ ಆಗಬೇಕು, ಉತ್ತೀರ್ಣ ಮಾಡಬೇಕು ಮತ್ತು ತಂದೆಯ ಸಮೀಪ(ಪಾಸ್) ಇರಬೇಕು ಆಗ ಪೂರ್ಣ ಪಾಸ್ ಆಗುವುವಿರಿ. ತಿಳಿಯಿತೆ.

ಈಗ ಹೆಚ್ಚಿನವರ ರಿಜಲ್ಟ್ ನಲ್ಲಿ - ಅನೇಕ ಮಾತುಗಳಲ್ಲಿ ಚೆನ್ನಾಗಿ ಪಾಸ್ ಆಗಿರುವಿರಿ. ಕೇವಲ ನಿಮ್ಮ ಹಳೆಯ ಸ್ವಭಾವ ಮತ್ತು ಸಂಸ್ಕಾರ. ಕೆಲವು ಬಾರಿ ಹೊಸ ಜೀವನದಲ್ಲಿ ಇಮರ್ಜ್ ಆಗುತ್ತವೆ. ನಿಮ್ಮ ಹಾಗೂ ಅನ್ಯರ ಸ್ವಭಾವ ಸಂಸ್ಕಾರಗಳೂ ಸಹ ಘರ್ಷಣೆ ಆಗುತ್ತವೆ. ನಿಮ್ಮ ದುರ್ಬಲ ಸಂಸ್ಕಾರ ಅನ್ಯರ ಸಂಸ್ಕಾರಗಳ ಜೊತೆ ಘರ್ಷಣೆ ಆಗುತ್ತದೆ. ಈ ದುರ್ಬಲತೆ ಈಗ ವಿಶೇಷ ಲಕ್ಷ್ಯವನ್ನು ತಲುಪುವುದರಲ್ಲಿ ವಿಘ್ನ ಆಗುತ್ತಿದೆ. ಪೂರ್ಣ ಪಾಸ್ ಆಗುವುದರ ಬದಲು ಪಾಸ್ ಅಂಕಗಳನ್ನು ಕೊಡಿಸುತ್ತದೆ. ನಿಮ್ಮ ಸ್ವಭಾವ ಸಂಸ್ಕಾರಗಳನ್ನು ಸಂಕಲ್ಪ ಮತ್ತು ಕರ್ಮದಲ್ಲಿ ತರಬೇಡಿರಿ, ಅನ್ಯರ ಸ್ವಭಾವ ಸಂಸ್ಕಾರಗಳ ಜೊತೆ ಘರ್ಷಣೆ ಮಾಡಿಕೊಳ್ಳಬೇಡಿ. ಎರಡರಲ್ಲಿಯೂ ಸಮಾವೇಶಗೊಳಿಸುವ ಮತ್ತು ಸಹನೆ ಶಕ್ತಿಯ ಅವಶ್ಯಕತೆ ಇದೆ. ಇದು ಪೂರ್ಣ ಉತ್ತೀರ್ಣ ಆಗುವುದರ ಸಮೀಪ ಬರಲು ಬಿಡುವುದಿಲ್ಲ ಮತ್ತು ಇದೇ ಕಾರಣದಿಂದ ಕೆಲವು ಬಾರಿ ಹುಡುಗಾಟಿಕೆ ಮತ್ತು ಕೆಲವು ಬಾರಿ ಆಲಸ್ಯ ಬಂದು ಬಿಡುತ್ತದೆ. ತಪಸ್ಯಾ ವರ್ಷದಲ್ಲಿ ಮನಸ್ಸು, ಬುದ್ದಿಯ ಏಕಾಗ್ರತೆ ಇರಬೇಕು ಅರ್ಥಾತ್ ನಾನು ಪೂರ್ಣ ಉತ್ತೀರ್ಣ ಆಗಲೇ ಬೇಕು ಎನ್ನುವ ಒಂದೇ ಸಂಕಲ್ಪ ಇರಬೇಕು. ಮಾಡಲೇ ಬೇಕು, ಆಗಲೇ ಬೇಕು. ಈ ಎಲ್ಲಾ ದುರ್ಬಲತೆಯನ್ನು ತಪಸ್ಸಿನ ಯೋಗಾಗ್ನಿಯಲ್ಲಿ ಭಸ್ಮ ಮಾಡಿರಿ. ಯೋಗಾಗ್ನಿ ಪ್ರಜ್ವಲಿತ ಆಗಿದೆಯೇ? ಲಗನ್ನಿನ ಅಗ್ನಿಯಲ್ಲಿ ಈಗಲೂ ಇರುತ್ತೀರಿ ಆದರೆ ಕೆಲವು ಬಾರಿ ಅಗ್ನಿ ಸ್ವಲ್ಪ ಪರ್ಸೆಂಟೇಜನಲ್ಲಿ ಕಡಿಮೆ ಆಗುತ್ತದೆ. ಆರುವುದಿಲ್ಲ, ಕಡಿಮೆ ಆಗುತ್ತದೆ. ಉರಿಯುವ ಅಗ್ನಿಯಲ್ಲಿ ಯಾವುದೇ ವಸ್ತು ಹಾಕಿದರೂ ಅದು ಪರಿವರ್ತನೆ ಆಗುತ್ತದೆ ಇಲ್ಲವೇ ಭಸ್ಮ ಆಗುತ್ತದೆ. ಪರಿವರ್ತನೆ ಅಥವಾ ಭಸ್ಮ ಮಾಡಲು ಅಗ್ನಿ ಪ್ರಖರವಾಗಿರಬೇಕು. ಯೋಗಾಗ್ನಿ ಮತ್ತು ಸಂಲಗ್ನತೆಯ ಅಗ್ನಿ ಈಗಲೂ ಉರಿಯುತ್ತಿದೆ ಆದರೆ ಸದಾ ಪ್ರಖರವಾಗಿರ ಬೇಕು. ಕೆಲವು ಬಾರಿ ಪ್ರಖರ ಕೆಲವು ಬಾರಿ ಮಂದವಾಗುವುದಲ್ಲ. ಸ್ಥೂಲವಾಗಿಯೂ ಸಹ ಇಲ್ಲಿ ಯಾವುದಾದರೂ ಪದಾರ್ಥ ಬೇಗ ಮತ್ತು ಚೆನ್ನಾಗಿ ಆಗಬೇಕಿದ್ದರೆ ಅಗ್ನಿಯನ್ನೂ ಸಹ ಅದರ ಅನುಸಾರ ಹೆಚ್ಚು ಮಾಡುತ್ತೀರಿ ಅದರಿಂದ ಪದಾರ್ಥ ಸಮಯಕ್ಕೆ ಸರಿಯಾಗಿ ಮತ್ತು ಚೆನ್ನಾಗಿ ತಯಾರಾಗುವುದು, ಮಧ್ಯದಲ್ಲಿ ಅಗ್ನಿ ಆರಿದರೆ ಪದಾರ್ಥವು ಸಮಯಕ್ಕೆ ಸರಿಯಾಗಿ ಚೆನ್ನಾಗಿ ತಯಾರಾಗುವುದೇ? ತಯಾರಾಗಬಹುದು ಆದರೆ ಸಮಯಕ್ಕೆ ಸರಿಯಾಗಿ ಆಗುವುದಿಲ್ಲ. ಹಾಗಾದರೆ ನಿಮ್ಮ ಯೋಗದ ಅಗ್ನಿಯೂ ಸಹ ಮಧ್ಯ ಮಧ್ಯದಲ್ಲಿ ಕಡಿಮೆ ಆಗಿಬಿಟ್ಟರೆ ಸಂಪನ್ನ ಆಗುವಿರಿ ಆದರೆ ಅಂತ್ಯದಲ್ಲಿ. ಲಾಸ್ಟನಲ್ಲಿ ಸಂಪನ್ನ ಆಗುವವರಿಗೆ ಫಾಸ್ಟ್ ಮತ್ತು ಫಸ್ಟ್ ರಾಜ್ಯ ಭಾಗ್ಯದ ಅಧಿಕಾರ ಸಿಗಲು ಸಾಧ್ಯ ಇಲ್ಲ. ನಿಮ್ಮೆಲ್ಲರ ಲಕ್ಷ್ಯ ಮೊದಲ ಜನ್ಮದಲ್ಲಿ ರಾಜ್ಯ ಭಾಗ್ಯ ಪಡೆಯುವುದು ಇದೆಯೋ ಅಥವಾ ಎರಡನೇಯ ಮೂರನೇಯ ಜನ್ಮದಲ್ಲಿ ಪಡೆಯುವಿರೊ? ಮೊದಲನೇಯ ಜನ್ಮದಲ್ಲಿ ಬರಬೇಕಲ್ಲವೇ?

ತಪಸ್ಯಾ ವರ್ಷ ಅರ್ಥಾತ್ ತೀವ್ರ ಪುರುಷಾರ್ಥ ಮಾಡಿ ಮೊದಲನೇಯ ಜನ್ಮದಲ್ಲಿ ಮೊದಲ ನಂಬರಿನ ಆತ್ಮರ ಜೊತೆ ರಾಜ್ಯ ಮಾಡುವುದು. ಮನೆಗೆ ಜೊತೆಯಲ್ಲಿ ಹೋಗಬೇಕಲ್ಲವೇ? ನಂತರ ರಾಜ್ಯದಲ್ಲಿಯೂ ಬ್ರಹ್ಮಾ ತಂದೆಯ ಜೊತೆ ಬರಬೇಕಾಗಿದೆ. ಹಾಗಾದರೆ ತಪಸ್ಯಾ ವರ್ಷ ಏಕೆ ಇಡಲಾಗಿದೆ ಎನ್ನುವುದು ತಿಳಿಯಿತೇ? ಏಕಾಗ್ರತೆಯ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ. ಈಗಲೂ ಇಚ್ಛೆ ಇಲ್ಲದಿದ್ದರೂ ವ್ಯರ್ಥ ಬಂದು ಬಿಡುತ್ತದೆ. ಶುದ್ಧ ಶ್ರೇಷ್ಠ ಸಂಕಲ್ಪಗಳಿಗಿಂತಲೂ ವ್ಯರ್ಥದ ತೂಕ ಕೆಲವು ಬಾರಿ ಹೆಚ್ಚಾಗಿ ಬಿಡುತ್ತದೆ.

ತಪಸ್ಸು ಅರ್ಥಾತ್ ವ್ಯರ್ಥ ಸಂಕಲ್ಪಗಳ ಸಮಾಪ್ತಿ. ಏಕೆಂದರೆ ಈ ಸಮಾಪ್ತಿಯೇ ಸಂಪೂರ್ಣತೆಯನ್ನು ತರುತ್ತದೆ. ಸಮಾಪ್ತಿ ಮಾಡದ ಹೊರತು ಸಂಪೂರ್ಣತೆ ಬರುವುದಿಲ್ಲ. ಆದ್ದರಿಂದ ಇಂದಿನಿಂದ ತಪಸ್ಯಾ ವರ್ಷವನ್ನು ಆರಂಭ ಮಾಡುತ್ತಿರುವಿರಿ. ಉಮಂಗ ಉತ್ಸಹಕ್ಕಾಗಿ ಬಾಪ್‌ದಾದಾ ಶುಭಾಶಯಗಳನ್ನು ಹೇಳುತ್ತಿರುವರು. ನಾಲ್ಕೂ ವಿಷಯಗಳಲ್ಲಿ ಪೂರ್ಣ ಉತ್ತೀರ್ಣರಾಗುವ ಅಂಕಗಳನ್ನು ತೆಗೆದುಕೊಳ್ಳಬೇಕು. ನನ್ನ ಮೂರು ವಿಷಯಗಳಂತೂ ಸರಿಯಾಗಿವೆ. ಒಂದರಲ್ಲಿ ಮಾತ್ರ ಕಡಿಮೆ ಇದೆ ಎಂದು ತಿಳಿಯಬಾರದು. ಪೂರ್ಣ ಉತ್ತೀರ್ಣ ಆಗುವಿರಾ? ಇಲ್ಲವಾದರೂ ಪಾಸ್ ಪಟ್ಟಿಯಲ್ಲಿ ಬರುವಿರಿ. **ಪೂರ್ಣ ಉತ್ತೀರ್ಣ ಅಂದರೆ ನಾಲ್ಕೂ ವಿಷಯಗಳಲ್ಲಿ ಪೂರ್ಣ ಅಂಕಗಳು ಇರಬೇಕು. ಸದಾ ಪ್ರತಿಯೊಂದು ಆತ್ಮನ ಪ್ರತಿ ಕಲ್ಯಾಣದ ಭಾವನೆ. ಅವರು ನಿಮ್ಮ ಸ್ಥಿತಿಯನ್ನು ಅಲ್ಲಾಡಿಸಲು ಪ್ರಯತ್ನ ಮಾಡಿದರೂ ಸಹ, ಅಕಲ್ಯಾಣ ಮಾಡುವವರ ಮೇಲೂ ಸಹ ಕಲ್ಯಾಣದ ಭಾವನೆ, ಕಲ್ಯಾಣದ ದೃಷ್ಟಿ, ಕಲ್ಯಾಣದ ವೃತ್ತಿ, ಕಲ್ಯಾಣಮಯ ಕೃತಿ ಇಂತಹವರಿಗೆ ಕಲ್ಯಾಣಕಾರಿ ಆತ್ಮ ಎಂದು ಹೇಳಲಾಗುತ್ತದೆ. ಶಿವ ಎನ್ನುವುದರ ಅರ್ಥವೂ ಕಲ್ಯಾಣಕಾರಿ ಅಲ್ಲವೇ? ಅಂದ ಮೇಲೆ ಶಿವ ಜಯಂತಿ ಅರ್ಥಾತ್ ಕಲ್ಯಾಣಕಾರಿ ಭಾವನೆ. ಕಲ್ಯಾಣ ಮಾಡುವವರ ಮೇಲೆ ಕಲ್ಯಾಣ ಮಾಡುವುದಂತೂ ಅಜ್ಞಾನಿಯೂ ಮಾಡುತ್ತಾರೆ. ಒಳ್ಳೆಯವರ ಜೊತೆ ಒಳ್ಳೆಯವರಾಗಿ ಇರುವುದನ್ನು ಎಲ್ಲರೂ ಮಾಡುತ್ತಾರೆ. ಆದರೆ ಅಕಲ್ಯಾಣದ ವೃತ್ತಿಯವರನ್ನು ನಿಮ್ಮ ಕಲ್ಯಾಣದ ವೃತ್ತಿಯಿಂದ ಪರಿವರ್ತನೆ ಮಾಡಿರಿ ಅಥವಾ ಕ್ಷಮಿಸಿ. ಪರಿವರ್ತನೆ ಮಾಡದಿದ್ದರೂ ಕ್ಷಮೆ ಅಂತೂ ಮಾಡಲು ಬರುತ್ತದೆ ಅಲ್ಲವೇ! ಮಾಸ್ಟರ್ ಕ್ಷಮಾಸಾಗರ ಅಂತೂ ಆಗಿರುವಿರಿ ಅಲ್ಲವೇ! ಆಗ ನಿಮ್ಮ ಕ್ಷಮೆ ಆ ಆತ್ಮಕ್ಕೆ ಶಿಕ್ಷಣ ಆಗುತ್ತದೆ. ಈಗಿನ ಕಾಲದಲ್ಲಿ ಶಿಕ್ಷಣ ಕೊಡುವುದರಿಂದ ಕೆಲವರು ತಿಳಿದುಕೊಳ್ಳುತ್ತಾರೆ. ಕೆಲವರು ತಿಳಿದುಕೊಳ್ಳುವುದಿಲ್ಲ. ಹೀಗೆ ಮಾಡಿರಿ ಎಂದರೆ ಅದು ಶಿಕ್ಷಣ ಆಗುತ್ತದೆ. ಕ್ಷಮೆ ಅರ್ಥಾತ್ ಶುಭ ಭಾವನೆಯ ಆಶೀರ್ವಾದಗಳನ್ನು ಕೊಡುವುದು. ಸಹಯೋಗ ಕೊಡುವುದು. ಶಿಕ್ಷಣ ಕೊಡುವ ಸಮಯ ಈಗ ಮುಗಿದು ಹೋಯಿತು. ಈಗ ಸ್ನೇಹ ಕೊಡಿ, ಸನ್ಮಾನ ಕೊಡಿ. ಕ್ಷಮೆ ಮಾಡಿರಿ. ಶುಭ ಭಾವನೆ ಇಟ್ಟುಕೊಳ್ಳಿ. ಶುಭ ಕಾಮನೆ ಇಟ್ಟುಕೊಳ್ಳಿ - ಇದೇ ಶಿಕ್ಷಣದ ವಿಧಿ ಆಗಿದೆ.** ಆ ವಿಧಿ ಹಳೆಯದಾಯಿತು. ಹಾಗಾದರೆ ಹೊಸ ವಿಧಿ ಬರುತ್ತದೆಯಲ್ಲವೇ? ತಪಸ್ಯಾ ವರ್ಷದಲ್ಲಿ ಹೊಸ ವಿಧಿಯಿಂದ ಸರ್ವರನ್ನೂ ಇನ್ನೂ ಸಮೀಪ ತನ್ನಿರಿ. ಮಣಿಗಳು ಕೆಲವು ತಯಾರಾಗಿವೆ ಆದರೆ ಇನ್ನೂ ಮಾಲೆ ತಯಾರಾಗಿಲ್ಲ ಎಂದು ಹೇಳಿದ್ದೆವಲ್ಲವೇ. ದಾರವೂ ಇದೆ ಮಣಿಗಳು ಇವೆ ಆದರೆ ಮಣಿ ಮಣಿಯ ಮಧ್ಯ ಸಮೀಪತೆ ಇಲ್ಲ ಆದ್ದರಿಂದ ಮಾಲೆ ತಯಾರಾಗಿಲ್ಲ. ತನ್ನದೇ ರೀತಿಯಲ್ಲಿ ಮಣಿ ತಯಾರಾಗಿದೆ ಆದರೆ ಸಂಘಟನೆಯಲ್ಲಿ, ಸಮೀಪತೆಯಲ್ಲಿ ತಯಾರಾಗಿಲ್ಲ. ಆದ್ದರಿಂದ ತಪಸ್ಯಾ ವರ್ಷದಲ್ಲಿ ತಂದೆ ಸಮಾನರಂತೂ ಆಗಲೇಬೇಕು. ಆದರೆ ಮಣಿ ಸಹ ಮಣಿಯ ಸಮೀಪ ಬರಬೇಕು. ಇನ್ನು ಯೋಗಿ ಆಗಿದ್ದಿರಿ, ಯೋಗಿ ಆಗಿರುವಿರಿ, ಸದಾ ಯೋಗಿ ಜೀವನದಲ್ಲಿಯೆ ಇರುವಿರಿ. ಡ್ರಾಮಾದ ಪ್ರತಿಯೊಂದು ದೃಶ್ಯವನ್ನು ಪ್ರಿಯವಾದದ್ದು ಎಂದು ನೋಡುತ್ತಾ ನಡೆಯಿರಿ. ಪ್ರತಿ ದೃಶ್ಯ ಪ್ರಿಯವಾಗಿದೆ. ಪ್ರಪಂಚದವರಿಗೆ ಯಾವುದು ಅಪ್ರಿಯವೊ ಅದು ನಿಮಗೆ ಪ್ರಿಯವಾಗಿದೆ. ಏನು ನಡೆದರೂ ಅದರಲ್ಲಿ ರಹಸ್ಯ ತುಂಬಿರುತ್ತದೆ. ರಹಸ್ಯವನ್ನು ತಿಳಿಯುವುದರಿಂದ ಎಂದೂ ಯಾವ ಮಾತಿನಲ್ಲಿ, ಯಾವ ದೃಶ್ಯದಲ್ಲಿ ಅಪ್ರಸನ್ನರಾಗುವುದಿಲ್ಲ. ರಹಸ್ಯ ತಿಳಿದವರು ಅಪ್ರಸನ್ನವಾಗುವುದಿಲ್ಲ. ರಹಸ್ಯವನ್ನು ತಿಳಿಯದವರು ಅಪ್ರಸನ್ನರಾಗುತ್ತಾರೆ.

ಡಬಲ್ ವಿದೇಶಿಯರೂ ಸಹ ಶಿವ ಜಯಂತಿ ಆಚರಿಸಲು ಸಮಯಕ್ಕೆ ಸರಿಯಾಗಿ ಬಂದು ತಲುಪಿರುವರು. ಹೋಗಲೇ ಬೇಕು ಎಂದು ಧೃಢ ನಿಶ್ಚಯ ಮಾಡಿದಿರಿ ಆದ್ದರಿಂದ ಬಂದು ತಲುಪಿದಿರಿ ಅಲ್ಲವೇ' ಹೋಗುವುದೋ ಬೇಡವೋ ಎಂದು ವಿಚಾರ ಮಾಡುವವರು ಉಳಿದುಬಿಟ್ಟರು. ಈಗ ಇದೇನೂ ಅಲ್ಲ, ಇನ್ನೂ ಆಗಲಿದೆ. ಈಗ ಪ್ರಕೃತಿ ಪೂರ್ಣ ಶಕ್ತಿಯಿಂದ ಏರುಪೇರು ಆರಂಭ ಮಾಡಿಲ್ಲ. ಮಾಡುತ್ತದೆ ಆದರೆ ನಿಮ್ಮನ್ನು ನೋಡಿ ಸ್ವಲ್ಪ ತಣ್ಣಗಾಗುತ್ತದೆ. ನನ್ನ ಮಾಲಿಕರು ತಯಾರಾಗಿಲ್ಲ ಎಂದು ಅದು ಸಹ ಹೆದರುತ್ತದೆ. ಯಾರ ದಾಸಿ ಆಗಬೇಕು? ನಿರ್ಭಯ ಆಗಿರುವಿರಿ ಅಲ್ಲವೇ? ಭಯಪಡುವವರಂತೂ ಅಲ್ಲ ತಾನೇ? ಜನರು ಸಾಯಲು ಭಯಪಡುತ್ತಾರೆ ಆದರೆ ನೀವಂತೂ ಸತ್ತು ಹೋಗಿರುವಿರಿ. ಹಳೆಯ ಜಗತ್ತಿನಿಂದ ಸತ್ತು ಹೋಗಿರುವಿರಿ ಅಲ್ಲವೇ? ಹೊಸ ಜಗತ್ತಿನಲ್ಲಿ ಬದುಕಿರುವಿರಿ, ಹಳೆಯ ಜಗತ್ತಿನಿಂದ ಸತ್ತು ಹೋಗಿರುವಿರಿ, ಅಂದಮೇಲೆ ಸತ್ತು ಹೋಗಿರುವವರಿಗೆ ಸಾಯಲು ಏನು ಭಯ? ಮತ್ತು

ಟ್ರಸ್ಟೀ ಆಗಿರುವಿರಿ ಅಲ್ಲವೇ? ನನ್ನತನ ಎನ್ನುವುದು ಇದ್ದರೆ ಮಾಯಾ ಬೆಕ್ಕು ಮ್ಯಾವ್ ಮ್ಯಾವ್ ಎನ್ನುತ್ತದೆ. ನಾನು ಬರಲೇ, ನಾನು ಬರಲೇ.. .. ನೀವಂತು ಟ್ರಸ್ಟಿ!! ಆಗಿಯೇ ಇರುವಿರಿ. ಶರೀರವೂ ನನದಲ್ಲ. ಜನರಿಗೆ ಸಾಯುವ ಚಿಂತೆ ಇರುತ್ತದೆ, ಅಥವಾ ವಸ್ತುಗಳ ಅಥವಾ ಪರಿವಾರದ ಚಿಂತೆ ಇರುತ್ತದೆ. ನೀವಂತು ಟ್ರಸ್ಟೀ ಆಗಿಯೇ ಇರುವಿರಿ. ಅತೀತ ಅಗಿರುವಿರಿ ಅಲ್ಲವೇ ಅಥವಾ ಸ್ವಲ್ಪ ಸ್ವಲ್ಪ ಸೆಳೆತ ಇದೆಯೇ? ದೇಹ ಅಭಿಮಾನ ಇದ್ದರೆ ಸೆಳೆತ ಇರುತ್ತದೆ. ಆದ್ದರಿಂದ ತಪಸ್ಯಾ ಅರ್ಥಾತ್ ಜ್ವಾಲಾ ಸ್ವರೂಪ, ನಿರ್ಭಯ. ಒಳ್ಳೆಯದು.

ಇಬ್ಬರೂ ಪ್ರೀತಿಯ ದಾದಿಯರು ಕೇಳುತ್ತಿರುವರು, ನೋಡುತ್ತಿರುವರು. ಏನಾದರೂ ನವೀನತೆ ಬೇಕಲ್ಲವೇ. ಬಾಪ್‌ದಾದಾ ಮೊದಲೂ ಹೇಳಿದ್ದರು ಒಂದಾಗಿದೆ ವಾಣಿಯ ಮೂಲಕ ಸೇವೆ, ಎರಡನೇಯದು ಫರಿಶ್ತಾ ಮೂರ್ತಿ ಮತ್ತು ಶಕ್ತಿಶಾಲಿ ಸ್ನೇಹಮಯಿ ದೃಷ್ಟಿಯಿಂದ ಸೇವೆ. ಕೆಲವು ಸಮಯ ಇವರಿಗೆ ಈ ಸೇವೆಯ ಪಾತ್ರ ಸಿಕ್ಕಿದೆ. ಆದಿಯಿಂದ ವಾಣಿ ಮತ್ತು ಕರ್ಮದ ಸೇವೆಯಂತೂ ಮಾಡುತ್ತಲೇ ಇರುವಿರಿ. ಈ ವಿಧಿಯ ಸೇವೆಯ ಪಾತ್ರ ಡ್ರಾಮಾದಲ್ಲಿ ಇದೆ. ಅಂತ್ಯದಲ್ಲಿ ಇದೇ ಸೇವೆ ಮಾಡುವುದಿರುತ್ತದೆ. ಈ ಪಾತ್ರ ಸ್ವಲ್ಪ ಸಮಯಕ್ಕಾಗಿ ಇವರಿಗೆ ಸಿಕ್ಕಿದೆ. ಆದರೂ ಪ್ರೀತಿಯ ಮಕ್ಕಳಲ್ಲವೆ. ಇವರು ಲೆಕ್ಕಾಚಾರ ಚುಕ್ತ ಮಾಡುವುದರಲ್ಲಿಯೂ ಸೇವೆ ಇದೆ. ನಿಮಿತ್ತ ಲೆಕ್ಕಾಚಾರ ಇದೆ ಆದರೆ ಸೇವೆ ಅದರ ರಹಸ್ಯವಾಗಿದೆ. ಬೇಹದ್‌ನ ಆಟದಲ್ಲಿ ಇದೂ ಸಹ ಇಂದು ಅದ್ಭುತ ಆಟ ಆಗಿದೆ. ಇಬ್ಬರ ಪಾತ್ರವೂ ನವೀನತೆಯದಾಗಿದೆ. ಇವರು ಬೇಗ ಬೇಗ ಲೆಕ್ಕಾಚಾರ ಮುಗಿಸಿ ಸಂಪನ್ನ ಮತ್ತು ಸಂಪೂರ್ಣತೆಯ ಸಮೀಪ ಹೋಗುತ್ತಿರುವರು. ಒಬ್ಬರೇ ಹೋಗುವುದಿಲ್ಲ ಇದನ್ನು ಯಾರೂ ವಿಚಾರ ಮಾಡಬೇಡಿರಿ. ಪ್ರತಿಯೊಬ್ಬರೂ ಚುಕ್ತ ಮಾಡಲೇ ಬೇಕು ಆದರೆ ಕೇವಲ ಕೆಲವರು ಚುಕ್ತ ಮಾಡುತ್ತಾರೆ ಇನ್ನು ಕೆಲವರು ಚುಕ್ತ ಮಾಡುತ್ತಾ ಸೇವೆಯನ್ನೂ ಮಾಡುತ್ತಾರೆ. ಎಲ್ಲರೂ ವಿಜಯೀ ಆದಿರಿ ಅಲ್ಲವೇ? ಎಲ್ಲರ ಆಶೀರ್ವಾದದ ಔಷಧಿಯೂ ಶೂಲದಂತೆ ಇರುವುದನ್ನು ಮುಳ್ಳಿನಂತೆ ಮಾಡುತ್ತದೆ.

ಲೆಕ್ಕಾಚರದ ಪ್ರಭಾವದಲ್ಲಿ ಬರಲಿಲ್ಲ. ಇಬ್ಬರೂ ಹುಷಾರ್ ಆದರು. ಕೇವಲ ಪಥ್ಯದಲ್ಲಿದ್ದಾರೆ. ವಿಶ್ರಾಂತಿಯೂ ಪಥ್ಯವೇ ಆಗಿದೆ. ಊಟದಲ್ಲಿ ಪಥ್ಯ ಇರುವಂತೆ ಇದು ಓಡಾಡುವ ಮಾತನಾಡುವ ಪಥ್ಯ ಆಗಿದೆ. ಸ್ನೇಹ ಏನು ತಾನೆ ಮಾಡಲು ಸಾಧ್ಯವಿಲ್ಲ! ಸ್ನೇಹ ಕಲ್ಲನ್ನೂ ಸಹ ನೀರನ್ನಾಗಿಸಿತು ಎಂದು ಹೇಳುತ್ತಾರೆ. ಅಂದ ಮೇಲೆ ಈ ಕಾಯಿಲೆ ಬದಲಾಗುವುದಿಲ್ಲವೇ. ಬದಲಾಯಿತಲ್ಲವೇ! ಹೃದಯದ ಕಾಯಿಲೆ ವಾಸಿಯಾಯಿತು. ಕಲ್ಲಿನಿಂದ ನೀರಾಯಿತಲ್ಲವೆ! ಇದು ನಿಮ್ಮೆಲ್ಲರ ಪ್ರೀತಿ ಆಗಿದೆ. ಇನ್ನು ಈಗ ಕೇವಲ ನೀರು ಉಳಿಯಿತು ಕಲ್ಲು ಸಮಾಪ್ತಿ ಆಯಿತು. ವಿಶ್ರಾಂತಿಯಲ್ಲಿರುವುದರಿಂದ ಇಬ್ಬರ ಮುಖ ಹೊಳೆಯುತ್ತಿದೆ. ಪರಿವಾರದ ಪ್ರೀತಿಯು ಸಹ ಬಹಳ ಸಹಾಯಮಾಡುತ್ತದೆ. ಒಳ್ಳೆಯದು.

**ನಾಲ್ಕೂ ಕಡೆಯ ಸರ್ವ ವಿಶ್ವ ಕಲ್ಯಾಣದ ಶ್ರೇಷ್ಠ ಭಾವನೆ ಇಟ್ಟುಕೊಳ್ಳುವಂತಹ, ನಾಲ್ಕೂ ಕಡೆಯ ಸರ್ವ ದೃಢ ಸಂಕಲ್ಪ ಇರುವವರಿಗೆ, ತಪಸ್ಸಿನ ಮೂಲಕ ಸ್ವಯಂನ್ನು, ವಿಶ್ವವನ್ನು ಪರಿವರ್ತನೆ ಮಾಡುವಂತಹ, ಏಕಾಗ್ರತೆಯ ಶಕ್ತಿಯಿಂದ ಎಕರಸ ತೀವ್ರ ಸ್ಥಿತಿಯಲ್ಲಿರುವಂತಹ, ಇಂತಹ ತಪಸ್ವೀ ಆತ್ಮರಿಗೆ, ಸ್ನೇಹೀ ಆತ್ಮರಿಗೆ, ಸದಾ ತಂದೆಯ ಜೊತೆಯಲ್ಲಿರುವಂತಹ ಆತ್ಮರಿಗೆ, ಸದಾ ಭಿನ್ನ ಭಿನ್ನ ವಿಧಿಯಿಂದ ಸೇವೆಯಲ್ಲಿ ಜೊತೆಯಲ್ಲಿರುವಂತಹ ಮಕ್ಕಳಿಗೆ ಮಹಾ- ಪರಮಾತ್ಮ ಜಯಂತಿಯ ಶುಭಾಶಯಗಳು ಮತ್ತು ನೆನಪು, ಪ್ರೀತಿ ಸ್ವೀಕಾರ ಮಾಡಿರಿ ಮತ್ತು ಜೊತೆ ಜೊತೆಗೆ ನಮಸ್ತೆ.**

ರಿವೈಸ್ ಕೋರ್ಸ್ 13-02-1991.

***ವಿಶ್ವ ಪರಿವರ್ತನೆಯಲ್ಲಿ ತೀವ್ರತೆ ತರುವ ಸಾಧನ ಏಕಾಗ್ರತೆಯ ಶಕ್ತಿ ಮತ್ತು ಏಕರಸ ಸ್ಥಿತಿ.***

ತಪಸ್ಸು ಅರ್ಥಾತ್ ದೃಢತೆ ಮತ್ತು ಏಕಾಗ್ರತೆ. ನೀವೆಲ್ಲರೂ ಯೋಗಿ ಜೀವನದವರು ಆಗಿರುವಿರಲ್ಲವೇ ಅಥವಾ ಎಂಟು, ಆರು ಗಂಟೆ ಅಥವಾ ಕೆಲವೇ ಗಂಟೆಗಳ ಕಾಲ ಯೋಗ ಮಾಡುತ್ತಿದ್ದೀರಾ ಯೋಗೀ ಜೀವನ ಇದ್ದೇ ಇದೆ. ಹಾಗಾದರೆ ವಿಶೇಷವಾಗಿ ತಪಸ್ಯಾ ವರ್ಷವನ್ನು ಏಕೆ ಆಚರಿಸುತ್ತಿರುವಿರಿ? ಮಕ್ಕಳನ್ನು ಯೋಗೀ ಜೀವನವುಳ್ಳ ಯೋಗಿ ಆತ್ಮರ ರೂಪದಲ್ಲಿ ನೋಡಲು ಬಾಪ್‌ದಾದಾ ಇಷ್ಟ ಪಡುತ್ತಾರೆ. ಕೆಲವು ಬಾರಿ ನಿಮ್ಮ ಹಳೆಯ ಸ್ವಭಾವ ಮತ್ತು ಸಂಸ್ಕಾರಗಳು ಹೊಸ ಜೀವನದಲ್ಲಿ ಇಮರ್ಜ್ ಆಗುತ್ತದೆ ಹಾಗೂ ಅನ್ಯರ ಸ್ವಭಾವ ಸಂಸ್ಕಾರಗಳೊಂದಿಗೆ ಘರ್ಷಣೆಯಾಗುತ್ತದೆ. ನಿಮ್ಮ ದುರ್ಬಲ ಸಂಸ್ಕಾರವೇ ಅನ್ಯರ ಸಂಸ್ಕಾರಗಳ ಜೊತೆ ಘರ್ಷಣೆಯಾಗುತ್ತದೆ. ಈ ದುರ್ಬಲತೆ ವಿಶೇಷ ಲಕ್ಷಣವನ್ನು ತಲುಪುವುದರಲ್ಲಿ ವಿಘ್ನವಾಗುತ್ತಿದೆ. ಪೂರ್ಣ ಪಾಸ್(ಉತ್ತೀರ್ಣ) ಆಗುವುದರ ಬದಲು ಪಾಸ್ ಅಂಕಗಳನ್ನು ಕೊಡಿಸುತ್ತಿದೆ. ಎಲ್ಲರೂ ಪೂರ್ಣ ಉತ್ತೀರ್ಣರಾಗಲು ಸಾಧ್ಯವಿದೆ. ಅದಕ್ಕೆ ಸಹಜ ಸಾಧನ ಬರುವಂತಹ ಪರಿಸ್ಥಿತಿಯನ್ನು ಒಂದು ವಿಷಯದಂತೆ ಭಾವಿಸದೆ ಪೇಪರ್ ಎಂದು ತಿಳಿಯಿರಿ.  ಪ್ರಶ್ನೆಗಳ ವಿಸ್ತಾರದಲ್ಲಿ ಹೋಗುವುದಲ್ಲ, ಪೂರ್ಣ ಉತ್ತೀರ್ಣ ಎಂದರೆ ನಾಲ್ಕು ವಿಷಯಗಳಲ್ಲಿ ಜ್ಞಾನ ಯೋಗ ಧಾರಣೆ ಸೇವೆ. ಪೂರ್ಣ ಅಂಕಗಳು ಬರಬೇಕು. ಸದಾ ಪ್ರತಿಯೊಂದು ಆತ್ಮನ ಪ್ರತಿ ಕಲ್ಯಾಣದ ಭಾವನೆ, ಅಕಲ್ಯಾಣ ಮಾಡುವವರ ಮೇಲೂ ಸಹ ಕಲ್ಯಾಣದ ಭಾವನೆ ಕಲ್ಯಾಣದ ದೃಷ್ಟಿ, ಕಲ್ಯಾಣದ ವೃತ್ತಿ, ಕಲ್ಯಾಣಮಯ ಕೃತಿ ಇಂತಹವರಿಗೆ ಕಲ್ಯಾಣಕಾರಿ ಎಂದು ಹೇಳಲಾಗುತ್ತದೆ ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಯಥಾರ್ಥ ಪ್ರಕಾಶವನ್ನು ಪ್ರಜ್ವಲಿತ ಮಾಡುವ ಶಿವರಾತ್ರಿಯನ್ನು ಆಚರಿಸಿಕೊಂಡಿದ್ದೇನೆ.

2. ನಾನು ಸರ್ವ ಖಜಾನೆಗಳಿಂದ ಸಿಂಧು ವಾಗಿ ಮತ್ತು ಮಾಸ್ಟರ್ ಬಿಂದುವಾಗಿ ತಯಾರಾಗಿದ್ದೇನೆ.

3. ನಾನು ಯೋಗೀ ಜೀವನವನ್ನು ಹೊಂದಿರುವ ಯೋಗಿ.

4. ನಾನು ಸರ್ವಗುಣಗಳಲ್ಲಿ, ಸರ್ವ ಸಂಬಂಧಗಳಲ್ಲಿ, ಸರ್ವ ಶಕ್ತಿಗಳಲ್ಲಿ, ಸರ್ವ ಸ್ವಭಾವ-ಸಂಸ್ಕಾರಗಳಲ್ಲಿ ಪಾಸ್ ವಿತ್ ಆನರ್ ಆಗಿದ್ದೇನೆ. (ಗೌರವಯುತವಾಗಿ ಪಾಸ್ ಆಗುವುದು).

5. ನಾನು ನನ್ನ ಮತ್ತು ಇತರರ ಸ್ವಭಾವ ಸಂಸ್ಕಾರಗಳನ್ನು ಸಂಕಲ್ಪ ಮತ್ತು ಕರ್ಮದಲ್ಲಿ ತರದ ಸಹನ ಶಕ್ತಿ ಮತ್ತು ಸಮಾವೇಶಗೊಳಿಸುವ ಶಕ್ತಿ ಸ್ವರೂಪ.

6. ನಾನು ಯೋಗಾಗ್ನಿ ಮತ್ತು ಸಂಲಗ್ನತೆಯ ಅಗ್ನಿಯನ್ನು ಪ್ರಜ್ವಲಿಸಿ ಸಂಪನ್ನವಾಗಿ ಮೊದಲ ರಾಜ್ಯ ಭಾಗ್ಯದ ಅಧಿಕಾರಿಯಾಗಿದ್ದೇನೆ.

7. ನಾನು ಸಂಘಟನೆಯಲ್ಲಿ ಸಮೀಪತೆಯನ್ನು ತಂದು ಮಾಲೆ ತಯಾರಾಗಲು ನಿಮಿತ್ತವಾಗಿದ್ದೇನೆ.

8. ನಾನು ಜ್ವಾಲಾ ರೂಪವಾಗಿ ಮತ್ತು ನಿರ್ಭಯವಾಗಿ ಇರುವ ತಪಸ್ಯಾ ಸ್ವರೂಪ.

9. ನಾನು ಬೇಗನೆ ಕರ್ಮಗಳ ಖಾತೆಯನ್ನು ಪೂರ್ಣಗೊಳಿಸಿಕೊಂಡು ಸಂಪನ್ನತೆ ಮತ್ತು ಸಂಪೂರ್ಣತೆಗೆ ಸಮೀಪ ಹೋಗಿದ್ದೇನೆ.

10. ನಾನು ಎಲ್ಲರ ಆಶೀರ್ವಾದಗಳು ಎಂಬ ಔಷಧಿಯಿಂದ ತ್ರಿಶೂಲವನ್ನು ಮುಳ್ಳಾಗಿ, ಕಲ್ಲನ್ನು ನೀರಾಗಿ ಪರಿವರ್ತನೆ ಮಾಡಿಕೊಂಡಿದ್ದೇನೆ.